OCTOBER 24, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- 'ವೋಕಲ್ ಫಾರ್ ಲೋಕಲ್' ಹಾಗೂ ಆತ್ಮ ನಿರ್ಭರ ಭಾರತ, ಸಂಕಲ್ಪ; ಮುಧೋಳ ಶ್ವಾನಗಳು, ಬಿ.ಎಸ್.ಎಫ್. 'ಕೆ–9 ಹಾಂಡ್ಸ್ ಸ್ಕ್ವಾಡ್' ಸೇರ್ಪಡೆ.
- ನೈಋತ್ಯ ರೇಲ್ವೆ; ಹುಬ್ಬಳ್ಳಿಯ, ಶ್ರೀ ಸಿದ್ಧಾರೂಢ ಸ್ವಾಮೀಜಿ, ರೈಲು ನಿಲ್ದಾಣದಲ್ಲಿ, ಪ್ರಯಾಣಿಕರೊಂದಿಗೆ, 'ಅಮೃತ ಸಂವಾದ'.
- ಮಿಷನ್ ನೇಮಕಾತಿ ಯೋಜನೆ; ಇಂದು, 17ನೇ ರಾಷ್ಟ್ರೀಯ ಉದ್ಯೋಗಮೇಳ.
- 27ನೇ ತಾರೀಖಿನಿಂದ, 'ಮಂಗಳೂರು ಇಂಡಿಯಾ, ಇಂಟರ್ ನ್ಯಾಷನಲ್ ಚಾಲೆಂಜ್, ಬ್ಯಾಡ್ಮಿಂಟನ್ ಪಂದ್ಯಾವಳಿ'.

<><><>

ಈಗ ವಾರ್ತೆಗಳ ವಿವರ

<><><>

ಕಿತ್ತೂರು ರಾಣಿ ಚನ್ನಮ್ಮನವರ, ಶೌರ್ಯ, ಸಾಹಸ, ಹೋರಾಟ ಹಾಗೂ ಆದರ್ಶಗಳು, ನಮ್ಮ ಮೈಗೂಡಲಿ ಎಂದು, ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಆಶಿಸಿದ್ದಾರೆ. ಕಿತ್ತೂರಿನ ಕೋಟೆ ಆವರಣದಲ್ಲಿ, ಕಿತ್ತೂರು ರಾಣಿ ಚನ್ನಮ್ಮ ವೇದಿಕೆಯಲ್ಲಿ, 201 ನೇ ವರ್ಷದ, ಕಿತ್ತೂರು ಉತ್ಸವವನ್ನು, ಉದ್ಘಾಟಿಸಿ ಮಾತನಾಡಿದರು.

<><><>

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ರಾಣಿ ಚನ್ನಮ್ಮ ಸೇರಿದಂತೆ, ಸ್ವತಂತ್ರ ಭಾರತದ ನಿರ್ಮಾಣದಲ್ಲಿ, ಮಹಿಳಾ ಹೋರಾಟಗಾರ್ತಿಯರ ಕೊಡುಗೆ ಅಪಾರ ಎಂದರು.

<><><>

ಸಮಾರಂಭದಲ್ಲಿ ಪಾಲ್ಗೊಂಡಿದ್ದ, ಹಲವು ಮಠಾಧೀಶರು, ಬೈಲಹೊಂಗಲದ ಚನ್ನಮ್ಮನವರ ಸಮಾಧಿ ರಾಷ್ಟ್ರೀಯ ಸ್ಮಾರಕವಾಗಲಿ; ಅಕ್ಟೋಬರ್ 23ನ್ನು ಸ್ವಾಭಿಮಾನ ದಿನವನ್ನಾಗಿ, ಸರ್ಕಾರ ಘೋಷಿಸಲಿ ಎಂದರು.

<><><>

ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು, ತಿಮ್ಮಾಪುರದ ಮುಧೋಳ ಶ್ವಾನ ತಳಿಯನ್ನು, ಗಡಿ ರಕ್ಷಣಾ ಪಡೆ – ಬಿ.ಎಸ್.ಎಫ್. ಗಡಿಗಳ ಕಾವಲಿಗೆ ಸೂಕ್ತ ತರಬೇತಿ ನೀಡಿ, 'ಕೆ–9 ಹಾಂಡ್ಸ್ ಸ್ಕ್ವಾಡ್' ರೂಪಿಸಿದೆ. 'ಆತ್ಮನಿರ್ಭರ ಭಾರತ' ಹಾಗೂ 'ವೋಕಲ್ ಫಾರ್ ಲೋಕಲ್' ಪ್ರಕಲ್ಪಗಳಡಿ, ಈ ಶ್ವಾನಗಳು ಈಗ ದೇಶ ಹಾಗೂ ಗಡಿ ರಕ್ಷಣೆಯ ಹೊಣೆ ಹೊತ್ತಿವೆ.

<><><>

ಈ ತಿಂಗಳ 31, ಸರದಾರ ವಲ್ಲಭಭಾಯಿ ಪಟೇಲ್ ಅವರ, ಜನ್ಮ ದಿನ. ದೇಶಾದ್ಯಂತ ಆಯೋಜಿತ, ಐಕ್ಯತೆ ಓಟ ಹಾಗೂ ಮಧ್ಯಪ್ರದೇಶದ, ಗ್ವಾಲಿಯರ್ ಜಿಲ್ಲೆ, ಟೇಕನ್‌ಪುರದಲ್ಲಿ ಆಯೋಜಿತ ಕವಾಯತಿನಲ್ಲಿ, ಬಿ.ಎಸ್.ಎಫ್., ಕೆ–9 ಹಾಂಡ್ಸ್ ತಂಡ, ಪ್ರಥಮ ಬಾರಿಗೆ ಪಾಲ್ಗೊಳ್ಳಲಿದೆ.

ಬಾಗಲಕೋಟೆ ಜಿಲ್ಲೆ, ಮುಧೋಳ ತಳಿ ಶ್ವಾನ ಸಂವರ್ಧನಾ ಕೇಂದ್ರ, ಬೀದರ ಪಶು ಚಿಕಿತ್ಸೆ, ಪಶು ಪಾಲನೆ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿದೆ.

<><><>

ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಬಾಗಲಕೋಟೆ ಜಿಲ್ಲೆ ಉಸ್ತುವಾರಿ ಸಚಿವ, ಆರ್.ಬಿ. ತಿಮ್ಮಾಪೂರ.

<><><>

ಆರ್.ಬಿ. ತಿಮ್ಮಾಪೂರ ಧ್ವನಿ 55 ಸೆಕೆಂದುಗಳು

<><><>

ನೈಋತ್ಯ ರೇಲ್ವೆ ಹುಬ್ಬಳ್ಳಿ ವಿಭಾಗ, ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣದಲ್ಲಿ, ಪ್ರಯಾಣಿಕರಿಗಾಗಿ, 'ಅಮೃತ ಸಂವಾದ' ಕಾರ್ಯಕ್ರಮ ಆಯೋಜಿಸಿತ್ತು. ನೈಋತ್ಯ ರೇಲ್ವೆ, ವಿಭಾಗೀಯ ಹೆಚ್ಚುವರಿ ವ್ಯವಸ್ಥಾಪಕ, ಪ್ರೇಮಚಂದ್ ಅವರು, ಅಮೃತ ಸಂವಾದದಲ್ಲಿ ಪಾಲ್ಗೊಂಡಿದ್ದರು. ರೇಲ್ವೆ ಮತ್ತು ಪ್ರಯಾಣಿಕರ ಮಧ್ಯೆ, ನೇರ ಸಂವಹನಕ್ಕಾಗಿ, ಅತ್ಯಂತ ಮಹತ್ವದ ವೇದಿಕೆ ಅಮೃತ ಸಂವಾದ. ಸಾರ್ವಜನಿಕರ ನಿರೀಕ್ಷೆಗಳನ್ನು ಅರಿತು, ಅಭಿಪ್ರಾಯಗಳನ್ನು ಪಡೆದು, ಭವಿಷ್ಯದ ರೇಲ್ವೆ ಅಭಿವೃದ್ಧಿ ಯೋಜನೆಗಳಲ್ಲಿ, ಅಳವಡಿಸಲು ಯೋಜಿಸಲಾಗಿದೆ.

<><><>

ಸ್ವಚ್ಛ ಭಾರತ ಅಭಿಯಾನ ಹಾಗೂ ವಿಶೇಷ ಸ್ವಚ್ಛತಾ ಆಂದೋಲನ 5.0 ಅಡಿ, ಹುಬ್ಬಳ್ಳಿ ರೈಲು ನಿಲ್ದಾಣದ ಸ್ವಚ್ಛತೆ ಕೈಗೊಳ್ಳಲಾಯಿತು.

<><><>

ಮಿಷನ್ ನೇಮಕಾತಿ, 17ನೇ ರಾಷ್ಟ್ರೀಯ ಉದ್ಯೋಗಮೇಳ, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ, ಇಂದು ಜರುಗಲಿದೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ವಿದ್ಯಾನಗರದ ಕೆ.ಎಲ್.ಇ. ಟೆಕ್ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಭಾರತೀಯ ಅಂಚೆ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಇತರೆ ಇಲಾಖೆಗಳು, ಉದ್ಯೋಗ ಮೇಳ ಆಯೋಜಿಸಿವೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಉದ್ಯೋಗ ಮೇಳವನ್ನು ಉದ್ಘಾಟಿಸಿ, ನೂತನವಾಗಿ ಆಯ್ಕೆಯಾಗುವ ಉದ್ಯೋಗಾಕಾಂಕ್ಷಿಗಳಿಗೆ, ನೇಮಕಾತಿ ಪತ್ರ ನೀಡಲಿದ್ದಾರೆ ಎಂದು, ಉತ್ತರ ಕರ್ನಾಟಕ ವಲಯದ, ಪೋಸ್ಟ್ ಮಾಸ್ಟರ್ ಜನರಲ್, ತಿಳಿಸಿದ್ದಾರೆ.

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(33 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಆತ್ಮನಿರ್ಭರ ಭಾರತ ಸಂಕಲ್ಪ ಅಭಿಯಾನದ ಹಿನ್ನೆಲೆ, ಕಲಬುರಗಿಯಲ್ಲಿ, ಸ್ವಾಭಿಮಾನಿ ಸ್ವದೇಶಿ ಮಳಿಗೆ ಸ್ಥಾಪಿಸಿ, ಸ್ವದೇಶಿ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಲಾಗಿದೆ. ಸ್ವಾಭಿಮಾನಿ ಸ್ವದೇಶಿ ಮಳಿಗೆಯಲ್ಲಿ, ದೇಶಿ ವಸ್ತ್ರ ಖಾದಿ ಹಾಗೂ 'ವೋಕಲ್ ಫಾರ್ ಲೋಕಲ್' ಅಭಿಯಾನದ ಕುರಿತು, ನಾಗರಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಸ್ವಾಭಿಮಾನಿ ಸ್ವದೇಶಿ ಮಳಿಗೆ ಪ್ರವರ್ತಕ, ಪ್ರಭು ಪಾಟೀಲ, ಆಕಾಶವಾಣಿಗೆ ಮಾಹಿತಿ ನೀಡಿ, ಕಳೆದ 15 ವ ರ್ಗಗಳಿಂದ, ಆಸಕ್ತ ಗೆಳೆಯರೊಂದಿಗೆ, ಪರಿಸರಕ್ಕೆ ಪೂರಕವಾದ, ಸ್ವದೇಶಿ ಉತ್ಪನ್ನಗಳ ಮಾರಾಟದಲ್ಲಿ ತೊಡಗಿದ್ದಾಗಿ, ತಿಳಿಸಿದ್ದಾರೆ.

<><><>

ಪ್ರಭು ಪಾಟೀಲ ಧ್ವನಿ 45 ಸೆಕೆಂದುಗಳು

<><><>

ಬರುವ ನವೆಂಬರ್ ತಿಂಗಳನ್ನು, 'ಮಕ್ಕಳ ಮಾಸ'ವೆಂದುಘೋಷಿಸಿ, ಮಕ್ಕಳ ಹಕ್ಕುಗಳ ರಕ್ಷಣೆಗೆ, ವಿಶೇಷ ಒತ್ತು ನೀಡಲಾಗುವುದು ಎಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ಕೆ.ಟಿ.ತಿಪ್ಪೇಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, ಮಾಹಿತಿ ನೀಡಿದ ಅವರು, ಇತ್ತೀಚೆಗೆ ರಾಜ್ಯದಲ್ಲಿ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು, ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಗರ್ಭಧಾರಣೆ ಹಾಗೂ ಬಾಲ್ಯ ವಿವಾಹ ಪ್ರಕರಣಗಳು ಏರುಗತಿಯಲ್ಲಿ ಕಂಡುಬಂದ ಹಿನ್ನೆಲೆ, ಮಕ್ಕಳ ಮಾಸಾಚರಣೆಗೆ, ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ತೆರೆದ ಮನೆ ಕಾರ್ಯಕ್ರಮದ ಮೂಲಕ, ಮಕ್ಕಳ ರಕ್ಷಣಾ ನೀತಿ 2016ನ್ನು, ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು, ಆಶಿಸಲಾಗಿದೆ ಎಂದರು.

<><><>

ಇಂದು, ವಿಶ್ವ ಪೊಲಿಯೋ ಜಾಗೃತಿ ದಿನ. ಪೊಲಿಯೋಕ್ಕೆ, ಸೂಕ್ತ ಚಿಕಿತ್ಸೆ ಇಲ್ಲ; ಆದರೆ ಲಸಿಕೆ ಹಾಕಿಸುವ ಮೂಲಕ, ತಡೆಯಬಹುದಾಗಿದೆ. ವಿಜ್ಞಾನಿ ಜೋನಾಸ್ ಸಾಲ್ಕ್ ಮತ್ತು ತಂಡ, 1955ರಲ್ಲಿ ಪೊಲಿಯೋ ಲಸಿಕೆ ಕಂಡುಹಿಡಿಯಿತು. 2014ರ ಮಾರ್ಚ್ 27 ರಂದು, ಭಾರತ, ಪೊಲಿಯೋ ಮುಕ್ತ ರಾಷ್ಟ್ರ ಎಂದು, ವಿಶ್ವ ಆರೋಗ್ಯ ಸಂಸ್ಥೆ, ಘೋಷಿಸಿತು.

<><><>

ಅಂತಾರಾಷ್ಟ್ರೀಯ ಸ್ಥರದ, 'ಮಂಗಳೂರು ಇಂಡಿಯಾ, ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಪಂದ್ಯಾವಳಿ', 27ನೇ ತಾರೀಖಿನಿಂದ, ಮಂಗಳೂರಿನ ಊರ್ವಾ ಒಳಾಂಗಣ ಕ್ರೀಡಾಂಗಣದಲ್ಲಿ, ಆಯೋಜಿತವಾಗಿದೆ. ದಕ್ಷಿಣಕನ್ನಡ ಜಿಲ್ಲಾಧಿಕಾರಿ ಎಚ್.ವಿ.ದರ್ಶನ ಮಾಹಿತಿ ನೀಡಿ, ಇದೇ ಮೊದಲ ಬಾರಿಗೆ ಮಂಗಳೂರಿನಲ್ಲಿ ಆಯೋಜಿತ ಬ್ಯಾಡ್ಮಿಂಟನ್ ಕ್ರೀಡಾಕೂಟಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲನೆ ನೀಡಲಿದ್ದಾರೆ ಎಂದರು.

<><><>

ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್‌ನ, 127ನೇ ಆವೃತ್ತಿಗಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ, ವಿದೇಶಗಳ ಭಾರತೀಯರಿಗೆ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ, ಕೋರಿದ್ದಾರೆ. ನಮೋ ಆಪ್, My Gov.inಜಾಲತಾಣ, ಅಥವಾ 1800–11–7800 ಗೆ ಕರೆ ಮಾಡಿ, ಸಾರ್ವಜನಿಕರು ಇಂದು ರಾತ್ರಿ ಒಳಗೆ, ತಮ್ಮ ಸಲಹೆಗಳನ್ನು, ದಾಖಲಿಸಬಹುದು. ಬರುವ ಭಾನುವಾರ, 26ನೇ ತಾರೀಖು, ಬೆಳಗ್ಗೆ 11 ಗಂಟೆಗೆ, ಮನದ ಮಾತು ಪ್ರಸಾರವಾಗಲಿದೆ.

<><><>

ಪ್ರಾಣಿಗಳ ದತ್ತು ಸ್ವೀಕಾರ ಯೋಜನೆಯಡಿ, ಮೈಸೂರಿನಶ್ರೀ ಚಾಮರಾಜೇಂದ್ರ ಮೃಗಾಲಯದ, ವಿವಿಧ ಪ್ರಾಣಿ–ಪಕ್ಷಿಗಳನ್ನು, 6 ಜನ ಸಾರ್ವಜನಿಕರು ಹಾಗೂ 3 ಸಂಘ–ಸಂಸ್ಥೆಗಳು, ಒಂದು ವರ್ಷದ ಅವಧಿಗೆ, ದತ್ತು ಪಡೆದಿದ್ದಾಗಿ, ಮೃಗಾಲಯದ ನಿರ್ದೇಶಕರು ತಿಳಿಸಿದ್ದಾರೆ. ಬೆಂಗಳೂರಿನ ಕೆ.ಟಿ.ಶಾಂತಲಾ ನವಿಲು ಹಾಗೂ ಕಾಳಿಂಗ ಸರ್ಪ, ವಿದುರ ಕಡಿದಾಳ ಹೂಲಾಕ್ ಗಿಬ್ಬನ್, ಎಸ್.ರಿಷಕ್, ರಶ್ಮಿ ಇಟಗಿ, ಮುಂಬೈನ ನಿಜೇಶ ಶಾ, ಕಪ್ಪು ಚಿರತೆಗಳನ್ನು, ಸಿ.ಬಿ.ನಾಗರಾಜ ಅವರು ಭಾರತೀಯ ಚಿರತೆಯನ್ನು, ಮೈಸೂರಿನ ಜೆ.ಎಸ್.ಎಸ್. ಕಾನೂನು ಮಹಾವಿದ್ಯಾಲಯ, ನರಿ ಮತ್ತು ಸಾಂಬಾರ ಜಿಂಕೆಯನ್ನು, ಮೈಸೂರು ಮಿಡ್‌ಟೌನ್ ರೋಟರಿ ಕ್ಲಬ್, ರಿಂಗ್‌ಟೇಲ್ಡ್ ಲೇಮರ್, ಚಿಕ್ಕಮಗಳೂರಿನ ವಿನ್ನರ್ಸ್ ಪ್ಯಾರಡೈಸ್ ಹಾಗೂ ಚಂದನ ಕನ್ಸಲ್ಟನ್ಸಿ, ಆಫ್ರಿಕನ್ ಚಿರತೆಯನ್ನು ದತ್ತು ಪಡೆದಿದ್ದಾರೆ.

<><><>

ಇಂದಿನಿಂದ 26ನೇ ತಾರೀಖಿನ ವರೆಗೆ, ದಕ್ಷಿಣಕನ್ನಡ ಜಿಲ್ಲೆಯ, ಕರಾವಳಿ ಗುಂಟ, ಭಾರೀ ಗಾಳಿಯೊಂದಿಗೆ, ರಭಸದ ಮಳೆ ಬೀಳುವ, ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮೀನುಗಾರರು, ಪ್ರವಾಸಿಗರು ಹಾಗೂ ಸಾರ್ವಜನಿಕರು, ಸಮುದ್ರಕ್ಕೆ ಇಳಿಯದಂತೆ ಜಿಲ್ಲಾಡಳಿತ, ಕಟ್ಟುನಿಟ್ಟಿನ ಸೂಚನೆ ನೀಡಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ವೋಕಲ್ ಫಾರ್ ಲೋಕಲ್' ಹಾಗೂ ಆತ್ಮ ನಿರ್ಭರ ಭಾರತ, ಸಂಕಲ್ಪ; ಮುಧೋಳ ಶ್ವಾನಗಳು, ಬಿ.ಎಸ್.ಎಫ್. 'ಕೆ–9 ಹಾಂಡ್ಸ್ ಸ್ಕ್ವಾಡ್' ಸೇರ್ಪಡೆ.
- ನೈಋುತ್ಯ ರೇಲ್ವೆ; ಹುಬ್ಬಳ್ಳಿಯ, ಶ್ರೀ ಸಿದ್ಧಾರೂಢ ಸ್ವಾಮೀಜಿ, ರೈಲು ನಿಲ್ದಾಣದಲ್ಲಿ, ಪ್ರಯಾಣಿಕರೊಂದಿಗೆ, 'ಅಮೃತ ಸಂವಾದ'.
- ಮಿಷನ್ ನೇಮಕಾತಿ ಯೋಜನೆ; ಇಂದು, 17ನೇ ರಾಷ್ಟ್ರೀಯ ಉದ್ಯೋಗಮೇಳ.
- 27ನೇ ತಾರೀಖಿನಿಂದ, 'ಮಂಗಳೂರು ಇಂಡಿಯಾ, ಇಂಟರ್ ನ್ಯಾಷನಲ್ ಚಾಲೆಂಜ್, ಬ್ಯಾಡ್ಮಿಂಟನ್ ಪಂದ್ಯಾವಳಿ'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>